# ಮೈಸೂರು ವಿಶ್ವವಿದ್ಯಾನಿಲಯ

(ಸ್ಥಾಪನೆ-1916)

(ನ್ಯಾಕ್ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್.-2024 ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ, ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

ಸಂಖ್ಯೆ: ಪ.ವಿ.8.1/ಪಿ.ಜಿ.ಬಿ/75/2009-10 ದಿನಾಂಕ: 09-10-2026

## ಅಧಿಸೂಚನೆ

ವಿಷಯ: ನವೆಂಬರ್-2026ರಲ್ಲಿ ನಡೆಯಲಿರುವ ಸ್ನಾತಕೋತ್ತರ ಪದವಿಯ (2024-25ನೇ Batch ಗೆ ಮಾತ್ರ ಅವಕಾಶ) III & IVನೇ ಸೆಮಿಸ್ಟರ್‌ನ ಮೇಕಪ್ (ಸಿಬಿಸಿಎಸ್ ಪದ್ಧತಿ) ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕ ಪಾವತಿ ಮಾಡಲು ಮತ್ತು ಅಭ್ಯರ್ಥನ ಪತ್ರ ಸಲ್ಲಿಸುವ ಬಗೆಗೆ.

*****

ನವೆಂಬರ್-2026ರಲ್ಲಿ ನಡೆಯಲಿರುವ CBCS ಪದ್ಧತಿಯ ಎಲ್ಲಾ ಕೋರ್ಸ್‌ಗಳ III & IVನೇ ಸೆಮಿಸ್ಟರ್‌ನ ಸ್ನಾತಕೋತ್ತರ ಪದವಿಯ ಮೇಕಪ್ ಪರೀಕ್ಷೆಗಳನ್ನು (Makeup Examinations), **ವಿಶ್ವವಿದ್ಯಾನಿಲಯದ ಮೌಲ್ಯಭವನ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ ನಿಗದಿಪಡಿಸಲಾಗಿದೆ.** ಪರೀಕ್ಷಾ ವೇಳಾಪಟ್ಟಿಯನ್ನು ಸಂಬಂಧಪಟ್ಟ ಅಧ್ಯಯನ ವಿಭಾಗಗಳು ಸಿದ್ಧಪಡಿಸಿ, ಸಂಬಂಧಿಸಿದ ಪ್ರೋಗ್ರಾಂಗಳನ್ನು (concerned programmes) ಬೋಧನೆ ಮಾಡುತ್ತಿರುವ ಇತರ ಕೇಂದ್ರ/ವಿಭಾಗ/ಕಾಲೇಜುಗಳಿಗೆ ಕಳುಹಿಸಿ ಕೊಡುವುದು ಹಾಗೂ ಅದರ ಒಂದು ಪ್ರತಿಯನ್ನು ಈ ಕಛೇರಿಗೂ ಸಹ ಕಳುಹಿಸುವುದು.

| | |
|---|---|
| 1 | **Open Elective** ಪರೀಕ್ಷೆಗಳನ್ನು ದಿನಾಂಕ: 03-11-2026 ರಂದು **ಎರಡು ಸೆಷನ್**‌ನಲ್ಲಿ ನಡೆಯುವಂತೆ ಮತ್ತು ಇತರ ವಿಷಯಗಳನ್ನು ನವೆಂಬರ್-2026ರ ದಿನಾಂಕ: 04, 05, 06 ಮತ್ತು 07 ರಂದು ಎರಡು ಸೆಷನ್‌ಗಳಲ್ಲಿ ನಡೆಯುವಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸುವುದು (ಸಮಯ 10.00 AM - 1.00 PM ಮತ್ತು 2.00 PM - 5.00 PM). |

| ಕ್ರ.ಸಂ | ವಿವರಗಳು | ಅಂತಿಮ ದಿನಾಂಕ |
|---|---|---|
| 1 | ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕಗಳನ್ನು ಆನ್‌ಲೈನ್ ಮುಖಾಂತರ ಪಾವತಿಸಿ ಹಾಗೂ ಶುಲ್ಕ ಪಾವತಿಸಿದ ನಂತರ ಪರೀಕ್ಷಾ ಅರ್ಜಿಗಳನ್ನು ಕಾಲೇಜಿಗೆ ಸಲ್ಲಿಸಲು (ವಿದ್ಯಾರ್ಥಿಗಳು UUCMS ಅಡಿಯಲ್ಲಿ ಪರೀಕ್ಷಾ ಶುಲ್ಕಗಳನ್ನು ಪಾವತಿಸುವ ಸಂದರ್ಭದಲ್ಲಿ ತಮ್ಮ ಕೋರ್ಸಿನ ಪತ್ರಿಕೆಗಳನ್ನು ಪರಿಶೀಲಿಸಿ ಆಯ್ಕೆ ಮಾಡಿಕೊಳ್ಳುವುದು). | **18-10-2026** |
| 2 | ರೂ.100/-ಗಳ ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು ನಿಗದಿಪಡಿಸಿರುವ ಕಡೆಯ ದಿನಾಂಕ (1st penalty) | **19-10-2026** |
| 3 | ರೂ.200/-ಗಳ ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು ನಿಗದಿಪಡಿಸಿರುವ ಕಡೆಯ ದಿನಾಂಕ (2nd penalty) | **20-10-2026** |
| 4 | ವೇಳಾಪಟ್ಟಿ ಮತ್ತು ಪ್ರಶ್ನೆಪತ್ರಿಕೆ ಬೇಡಿಕೆಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಅಂತಿಮ ದಿನಾಂಕ | **22-10-2026** |
| 5 | ಪ್ರವೇಶ ಪತ್ರಗಳ ಮುದ್ರಣದ ನಂತರ ಈ ಕಛೇರಿಗೆ ವಿದ್ಯಾರ್ಥಿಗಳು ಪಾವತಿಸಿರುವ ಪರೀಕ್ಷಾ ಶುಲ್ಕಗಳ ಮಾಹಿತಿಯನ್ನು ಕ್ರೋಢಿಕರಿಸಿ ಈ ಕಛೇರಿಗೆ ಸಲ್ಲಿಸುವ ದಿನಾಂಕ | **24-10-2026** |
| 6 | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | **03-11-2026ರಿಂದ 07-11-2026ರವರೆಗೆ** |
| 7 | ಪ್ರಾಯೋಗಿಕ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | **09-11-206 ರಿಂದ 13-11-2026 ರವರೆಗೆ** |

## ವಿಶೇಷ ಸೂಚನೆಗಳು:

1. ಪರೀಕ್ಷಾ ಕಾರ್ಯಗಳು UUCMS ಅಡಿಯಲ್ಲಿರುವುದರಿಂದ ಕಾಲೇಜಿನ ವತಿಯಿಂದ "academic moduleನಲ್ಲಿ curiculam mapping" ಮಾಡಿದ ನಂತರ, ವಿದ್ಯಾರ್ಥಿಗಳು ಆನ್‌ಲೈನ್ (UUCMS) ಮೂಲಕ ಪತ್ರಿಕೆಗಳನ್ನು ಆಯ್ಕೆ ಮಾಡಿಕೊಂಡು "mapping" ಮಾಡಲು ಕಾಲೇಜಿನವರು QP Code/Course Code ಗಳನ್ನು ನೀಡಬೇಕು ಹಾಗೂ ಆನ್‌ಲೈನ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸಲು ಮಾರ್ಗದರ್ಶನ ನೀಡುವುದು.

2. **ಕಾಲೇಜಿನ ಆಡಳಿತ ವರ್ಗ ಹಾಗೂ ಸಿಬ್ಬಂದಿ, ವಿದ್ಯಾರ್ಥಿಗಳು ಭರ್ತಿ ಮಾಡಿದ ವಿಷಯಗಳ ಆಯ್ಕೆ (subject selection) ಹಾಗೂ ಪರೀಕ್ಷಾ ಅರ್ಜಿಗಳಲ್ಲಿ ನ್ಯೂನ್ಯತೆಗಳಿದ್ದರೆ,** (ಪ್ರವೇಶ ಪತ್ರಗಳ ಮುದ್ರಣಕ್ಕೆ ಸಂಬಂಧಿಸಿದಂತೆ), ಪ್ರಾಂಶುಪಾಲರ ಅನುಮೋದನೆ ಪಡೆಯುವ ಮೊದಲು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿರುವ ಪತ್ರಿಕೆಗಳನ್ನು ಪುನಃ ಪರಿಶೀಲಿಸಿಕೊಳ್ಳುವುದು, **ಇಲ್ಲದಿದ್ದರೆ ಕಾಲೇಜಿನ ಪ್ರಾಂಶುಪಾಲರು ಇಂತಹ ತಪ್ಪುಗಳಿಗೆ ಹೊಣೆಗಾರರಾಗಿರುತ್ತಾರೆ.**

## ಪರೀಕ್ಷಾ ಶುಲ್ಕಗಳ ವಿವರಗಳು

**1. Speech & Hearing/MCA/LLM/ M.Sc. Computer Science/M.Tech in URP/ Polymer Science/Biochemistry/Biotechnology/Environmeal Science/Sugar Technology/ Electronics/ M.Lib.Sci MBA (Agri- Business)/ MSW/ MSc (Criminology & Forensic Science)/Master of Fine Arts/ M.Sc.(IT):**

| | | |
|---|---|---|
| i) | Whole Exam (Per Sem/Exam) | ₹ 3,690=00 |
| ii) | Per Paper with Pratical | ₹ 2,230=00 |
| iii) | Per Paper without Pratical | ₹ 1,770=00 |

**2. M.Com/M.Ed/M.P.Ed./M.Sc/MMusic/M.A/and all other Master Degree Courses:**

| | | |
|---|---|---|
| i) | Whole Exam (Per Exam) | ₹ 2,565=00 |
| ii) | Per Paper with Pratical | ₹ 2,230=00 |
| iii) | Per Paper without Pratical | ₹ 1,770=00 |

ವಿ.ವಿ.ಆದೇಶ ಸಂಖ್ಯೆ:ಎಸಿ.2(ಎಸ್)/122/04-05, ದಿನಾಂಕ: 04-02-2005ರ ಪ್ರಕಾರ ಎಲ್ಲಾ ಪ್ರೋಗ್ರಾಂಗಳಿಗೆ ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಪತ್ರಿಕೆಗಳ ಪರೀಕ್ಷೆ ತೆಗೆದುಕೊಂಡಲ್ಲಿ ಪಾವತಿಸಬೇಕಾದ ಗರಿಷ್ಠ ಪರೀಕ್ಷಾ ಶುಲ್ಕವು ಆಯಾಯ ವರ್ಷಕ್ಕೆ ವಿಷಯವಾರು ನಿಗದಿಗೊಳಸಲಾಗಿರುವ ಪೂರ್ಣ ಪರೀಕ್ಷಾ ಶುಲ್ಕಕ್ಕೆ (Whole examination fee) ಸಮಾನವಾಗಿರುತ್ತದೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

## ಸೂಚನೆಗಳು:

1. **Special Makeup** ಪರೀಕ್ಷೆ ತೆಗೆದುಕೊಂಡಿರುವ ಎಲ್ಲಾ ಕೋರ್ಸ್‌ಗಳ III & IVನೇ ಸೆಮಿಸ್ಟರ್ ವಿದ್ಯಾರ್ಥಿಗಳ ಅಭ್ಯರ್ಥಿನ ಪಟ್ಟಿಯನ್ನು **(Candidate List)** ಪ್ರತ್ಯೇಕವಾಗಿ ಈ ಕಛೇರಿಗೆ ಕಳುಹಿಸುವುದು.

2. **Special Makeup** ಪರೀಕ್ಷೆ ಲಿಖಿತ, ಪ್ರಾಯೋಗಿಕ, ಮೌಖಿಕ, ಮಹಾ/ಲಘು ಪ್ರಬಂಧ/ಪ್ರಾಜೆಕ್ಟ್‌ಗಳಿಗೂ ಅನ್ವಯಿಸುತ್ತದೆ.

3. ಪ್ರಾಯೋಗಿಕ, ಮೌಖಿಕ ಪರೀಕ್ಷೆಗಳ ವೇಳಾಪಟ್ಟಿಗಳನ್ನು (ಲಿಖಿತ ಪರೀಕ್ಷೆಗಳ ನಂತರ) ಪರೀಕ್ಷಾ ಮಂಡಳ ಅಧ್ಯಕ್ಷರೊಡನೆ ಸಮಾಲೋಚಿಸಿ ನಿಗದಿಪಡಿಸಿ ನಂತರ ಪರೀಕ್ಷೆ ನಡೆಸಿ ಅಂಕಗಳನ್ನು ವಿಶ್ವವಿದ್ಯಾನಿಲಯಕ್ಕೆ ಕಳುಹಿಸುವುದು.

4. ಅನುತ್ತೀರ್ಣ ವಿದ್ಯಾರ್ಥಿಗಳು ಮತ್ತು ಅಂಕಗಳ ಮರುಸಂಕಲನ/ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳೂ ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳು ಮೇಲೆ ಸೂಚಿಸಿದ ದಿನಾಂಕಗಳಂದು ಅಥವಾ ಅದಕ್ಕಿಂತ ಮುಂಚಿತವಾಗಿ ಪರೀಕ್ಷಾ ಶುಲ್ಕವನ್ನು ಪಾವತಿಸಿದ ಬ್ಯಾಂಕ್ ಚಲನ್ ಮತ್ತು ಇತ್ತೀಚಿನ ಭಾವಚಿತ್ರದೊಂದಿಗೆ ಪರೀಕ್ಷಾ ಅರ್ಜಿಗಳನ್ನು ತಾವು ಅಧ್ಯಯನ ಮಾಡಿದ ವಿಭಾಗ/ಸಂಸ್ಥೆಗಳ ಮುಖಾಂತರ ಕಳುಹಿಸಬೇಕು.

5. ಕ್ರ.ಸಂ.ಎ.ಸಿ.2/182/92-93, ದಿನಾಂಕ: 02-03-2000ರ ಕುಲಸಚಿವರ ಪತ್ರದಲ್ಲಿ ತಿಳಿಸಿರುವ ರೀತ್ಯಾ ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗ ಹಾಗೂ ಕ್ಯಾಟಗರಿ-1ರ ವರ್ಗದ ವಿದ್ಯಾರ್ಥಿಗಳು ಸದರಿ ಪ್ರೋಗ್ರಾಂ ಮುಗಿಸಿದ ನಂತರ ರಿಪೀಟರ್ಸ್ ಆಗಿ ಪರೀಕ್ಷೆಗಳನ್ನು ತೆಗೆದುಕೊಂಡಲ್ಲಿ ಅಂತಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕಗಳನ್ನು **ತಪ್ಪದೆ ವಸೂಲು ಮಾಡತಕ್ಕದ್ದು.**

6. ಒಮ್ಮೆ ಪಾವತಿ ಮಾಡಿದ ಪರೀಕ್ಷಾ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿಯೂ ಆಗಲಿ ಮರುಪಾವತಿ ಮಾಡಲಾಗುವುದಿಲ್ಲ ಅಥವಾ ಮುಂದಿನ ಪರೀಕ್ಷೆಗೆ ಹೊಂದಾಣಿಕೆ ಮಾಡಲಾಗುವುದಿಲ್ಲ.

7. ಪರೀಕ್ಷೆಯ ಒಂದು ಭಾಗವಾಗಿರುವ ಮಹಾನಿಬಂಧ/ಪ್ರೌಢ ಪ್ರಬಂಧ/ಪ್ರಾಜೆಕ್ಟ್ ಕಾರ್ಯ/ಕ್ಷೇತ್ರಕಾರ್ಯ ವರದಿ ಇತ್ಯಾದಿಗಳನ್ನು ನಿರ್ದಿಷ್ಟ ವಿಷಯದಲ್ಲಿನ ಲಿಖಿತ/ಪ್ರಾಯೋಗಿಕ ಪರೀಕ್ಷೆಯ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಅಧ್ಯಯನ ವಿಭಾಗಗಳ ಸಂಬಂಧಪಟ್ಟ ಅಧ್ಯಕ್ಷರು/ಮುಖ್ಯಸ್ಥರಿಗೆ ದ್ವಿಪ್ರತಿಗಳಲ್ಲಿ ಸಲ್ಲಿಸಬೇಕು. ಪ್ರೌಢಪ್ರಬಂಧದಲ್ಲಿ ವಿದ್ಯಾರ್ಥಿಯ ಹೆಸರು ಮತ್ತು ನೋಂದಣಿ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

**ವಿಶೇಷ ಸೂಚನೆ:**

1) ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು/ನಿರ್ದೇಶಕರು/ಕಾಲೇಜುಗಳ ಮುಖ್ಯಸ್ಥರುಗಳು ಪರೀಕ್ಷಾ ಸಂಬಂಧ ಎಲ್ಲಾ ದಾಖಲೆಗಳನ್ನು ನಿಗದಿತ ದಿನಾಂಕದೊಳಗೆ ಕಳುಹಿಸಿಕೊಡುವುದು.

2) **ಎಲ್ಲಾ ಕೋರ್ಸ್‌ಗಳ III & IV ನೇ ಸೆಮಿಸ್ಟರ್‌ನ ಮೇಕಪ್ ಪರೀಕ್ಷೆಗಳನ್ನು ವಿಶ್ವವಿದ್ಯಾನಿಲಯದ ಪರೀಕ್ಷಾ ಭವನದಲ್ಲಿ ನಿಗದಿಪಡಿಸಿರುವುದನ್ನು ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತಪ್ಪದೇ ತರಬೇಕಾಗಿ ಕೋರಿದೆ.**

09/10/26

**ಕುಲಸಚಿವ (ಪರೀಕ್ಷಾಂಗ)**

ಇವರಿಗೆ:

1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಮಾಗಂ, ಮೈಸೂರು.
2. ವಿಶ್ವವಿದ್ಯಾನಿಲಯದಿಂದ ಸಂಯೋಜಿತಗೊಂಡ ಎಲ್ಲಾ ಸ್ನಾತಕೋತ್ತರ ಕಾಲೇಜುಗಳು/ಕೇಂದ್ರಗಳು.
3. ಪ್ರೊ. ಕೆ. ರಾಮಚಂದ್ರ ಕಿಣಿ, ಚೀಫ್ ನೋಡಲ್ ಆಫೀಸರ್ (UUCMS), ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
4. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.
5. ಉಪ ಕುಲಸಚಿವ(ಪರೀಕ್ಷಾಂಗ), ಅಧೀಕ್ಷಕರು, ಪರೀಕ್ಷಾ ಸುಧಾರಣ ಘಟಕ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಮಾನ್ಯ ಕುಲಪತಿ/ಕುಲಸಚಿವ/ ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕಾರ್ಯನಿರ್ವಾಹಕರು, ಪ.ವಿ.8.2/8.3/8.5/8.7/8.9/1.7/, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು- ಸೂಕ್ತ ಕ್ರಮಕ್ಕಾಗಿ.
8. ಕಛೇರಿ ಪ್ರತಿ.

D/P.G. Makeup